ಗಣಪತಿ ಕಲಂತ್ರಿ

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 271 (1996) |
| ಉತ್ತರಿಸುವ ದಿನಾಂಕ | 24-03-2021 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2013-2018ರ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅನುಮೋದಿಸಿದ ಬಡಾವಣೆಗಳಾದ ಮಾಗಡಿ ರಸ್ತೆಯ ಕಾವೇರಿಪುರ, ಮಾರುತಿ ನಗರ, ಮೀನಾಕ್ಷಿನಗರ, ರಂಗನಾಥಪುರ ಮತ್ತು ಸಣ್ಣಕ್ಕಿ ಬಯಲು ಪ್ರದೇಶಗಳ 337 ಮಾರಾಟ ಪತ್ರಗಳ ನೋಂದಣಿಯಿಂದ 103.39 ಕೋಟಿ ಮೊತ್ತದಷ್ಟು ಮುದ್ರಾಂಕ ಶುಲ್ಕ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು ಬಂದಿದೆ.<br><br>2013-2018ರ ಅವಧಿಯಲ್ಲಿನ 337 ಮಾರಾಟ ಪತ್ರಗಳು ಕಾವೇರಿಪುರ, ಮಾರುತಿ ನಗರ, ಮೀನಾಕ್ಷಿನಗರ, ರಂಗನಾಥಪುರ ಮತ್ತು ಸಣ್ಣಕ್ಕಿ ಬಯಲು ಈ ಪ್ರದೇಶಗಳಲ್ಲಿ ಆಗಿರುವ ಕ್ರಯಪತ್ರಗಳಾಗಿರುತ್ತವೆ. ಈ ಎಲ್ಲಾ ಪ್ರದೇಶಗಳು ಪ್ರಮುಖ ಪ್ರದೇಶವಾದ ಸಾಣೆಗುರುವನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿದ್ದು, ಈ ಸಾಣೆಗುರುವನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಮುಖ್ಯ ಪ್ರದೇಶಗಳಾದ ಬಸವೇಶ್ವರನಗರ, ಕೆ.ಹೆಚ್.ಬಿ. ಕಾಲೋನಿ, ಗಾಯತ್ರಿನಗರ, ಅಷ್ಟಗ್ರಾಮ ಬಡಾವಣೆ, ವೆಸ್ಟ್ ಆಫ್ ಕಾರ್ಡ್ ರೋಡ್ ಎಕ್ಸ್‌ಟೆನ್ಷನ್, ಶಾರದ ಕಾಲೋನಿ, ಎಲ್.ಐ.ಸಿ. ಕಾಲೋನಿ ಮತ್ತು ಬ್ಯಾಂಕ್ ಆಫೀಸರ್ಸ್ ಕಾಲೋನಿ ಇತ್ಯಾದಿ ಬಡಾವಣೆಗಳು ಸಹ ಒಳಗೊಂಡಿರುತ್ತವೆ. ಈ ಸಾಣೆಗುರುವನಹಳ್ಳಿ ಗ್ರಾಮದ ವ್ಯಾಪ್ತಿಯು ಬಹಳ ವಿಸ್ತಾರವಾಗಿದ್ದು, ಮೇಲ್ಕಂಡ ಬಡಾವಣೆಗಳ ಜೊತೆ ಸ್ಲಂ ಪ್ರದೇಶ (ಕೊಳಚೆ/ಹಿಂದುಳಿದ ವರ್ಗಗಳ ಪ್ರದೇಶ)ಗಳಾದ ಕಾವೇರಿಪುರ, ಮಾರುತಿ ನಗರ, ಮೀನಾಕ್ಷಿನಗರ, ರಂಗನಾಥಪುರ ಮತ್ತು ಸಣ್ಣಕ್ಕಿಬಯಲು ಪ್ರದೇಶಗಳ ದರಗಳನ್ನು ಅನುಬಂಧ-1ರಲ್ಲಿ ಸಲ್ಲಿಸಲಾಗಿದೆ.<br><br>ಹಾಗೂ ಇದೇ ಸಾಣೆಗುರುವನಹಳ್ಳಿ ಪ್ರಮುಖ ಪ್ರದೇಶದ ಮೇಲ್ಕಂಡ ಬಡಾವಣೆಗಳಲ್ಲಿ ದರಗಳನ್ನು ಅನುಬಂಧ-2 ರಲ್ಲಿ ಸಲ್ಲಿಸಲಾಗಿದೆ.<br><br>ಇಂತಹ ಪ್ರದೇಶಗಳಿದ್ದಾಗ ಪ್ರದೇಶದ ಪ್ರಸ್ತುತ / ಹಾಲಿ ಪರಿಸ್ಥಿತಿ, ಮಾರಾಟದ ಅಂಕಿ ಅಂಶಗಳು ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಆಸ್ತಿಗಳಿಗೆ ಇರುವ ಬೇಡಿಕೆಗಳಿಗನುಸಾರ ಕೇಂದ್ರ ಮೌಲ್ಯ ಮಾಪನ ಸಮಿತಿಯ ವತಿಯಿಂದ ದರ ನಿಗದಿಪಡಿಸಲಾಗುತ್ತದೆಯೇ ಹೊರತು ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ನಷ್ಟ ಉಂಟು ಮಾಡುವ ಉದ್ದೇಶ ಇರುವುದಿಲ್ಲ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಈ ಹಿನ್ನೆಲೆಯಲ್ಲಿ ಈ ಐದು (ಕಾವೇರಿಪುರ, ಮಾರುತಿ ನಗರ, ಮೀನಾಕ್ಷಿನಗರ, ರಂಗನಾಥಪುರ ಮತ್ತು ಸಣ್ಣಕ್ಕಿ ಬಯಲು) ವಸತಿ ಬಡಾವಣೆಗಳಾಗಿದ್ದರೂ ಸಹಾ ಈ ಬಡಾವಣೆಗಳಲ್ಲಿ ಕಡಿಮೆ ಆದಾಯ ವರ್ಗದ ಜನರು ವಾಸಿಸುತ್ತಿದ್ದು, ಕಡಿಮೆ ಅಳತೆಯ ನಿವೇಶನಗಳು ಮತ್ತು ಕಿರಿದಾದ (ಕಡಿಮೆ ಅಳತೆಯ) ರಸ್ತೆಗಳು ಇದ್ದು, ಇಂತಹ ಬಡಾವಣೆಗಳಿಗೆ ಅದೇ ಪ್ರದೇಶದ ಅಗಲವಾದ ರಸ್ತೆಗಳು, ದೊಡ್ಡ (ಹೆಚ್ಚಿನ ಅಳತೆ) ನಿವೇಶನಗಳು, ನಾಗರೀಕ ಸೌಲಭ್ಯಗಳು, ಉದ್ಯಾನವನಗಳು ಇತ್ಯಾದಿ ಇರುವಂತಹ ಬಡಾವಣೆಗಳಿಗೆ ಹೆಚ್ಚಿನ ದರ ನಿಗದಿಪಡಿಸಲಾಗಿರುತ್ತದೆ.<br><br>ಈ ಮೇಲ್ಕಂಡ ದರಗಳನ್ನು ಸದರಿ ಸ್ವತ್ತುಗಳು ಇರುವ ಉಪ ನೋಂದಣಾಧಿಕಾರಿ ಮತ್ತು ಜಿಲ್ಲಾ ನೋಂದಣಾಧಿಕಾರಿ ಮಾರುಕಟ್ಟೆ ದರ ಪರಿಷ್ಕರಣೆ ವೇಳೆ ಸಲ್ಲಿಸುವ ಪ್ರಸ್ತಾವನೆಗಳ ಹಿನ್ನೆಲೆಯಲ್ಲಿ ಕೇಂದ್ರ ಮೌಲ್ಯಮಾಪನ ಸಮಿತಿಯಿಂದ ಆಸ್ತಿ ನೆಲೆಗೊಂಡಿರುವ ಪ್ರದೇಶದ ಪ್ರಸ್ತುತ / ಹಾಲಿ ಪರಿಸ್ಥಿತಿಯಲ್ಲಿ ದರ ನಿಗದಿಪಡಿಸಲಾಗಿದೆಯೇ ವಿನಃ ಒಟ್ಟಾರೆ ಪ್ರದೇಶದ ಮೇಲೆ ದರ ನಿಗದಿಪಡಿಸಲಾಗಿರುವುದಿಲ್ಲ.<br><br>ಕೇಂದ್ರ ಮೌಲ್ಯಮಾಪನ ಸಮಿತಿಯು **Central Valuation Committee (CVC) Rule (3)**ರ ಪ್ರಕಾರ ಸರ್ಕಾರವು ರಚಿಸಿರುವ ಒಂದು ಸಮಿತಿಯಾಗಿದ್ದು, ಸದರಿ ಸಮಿತಿಯಲ್ಲಿ ದರ ನಿಗದಿಪಡಿಸುವಾಗ ಎಲ್ಲಾ ಅಂಶಗಳನ್ನು ಪರಿಗಣಿಸಿಯೇ ದರ ನಿಗದಿಪಡಿಸಲಾಗುತ್ತದೆ. ಆದ್ದರಿಂದ ನಿಗದಿಪಡಿಸಿರುವ ದರಗಳು ವೈಜ್ಞಾನಿಕವಾಗಿರುತ್ತದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸದರಿ ಪ್ರದೇಶದ ವಿವಿಧ ಬಡಾವಣೆಗಳಿಗೆ ನಿಗದಿಪಡಿಸಿರುವ ದರಗಳಲ್ಲಿ ಯಾವುದೇ ಲೋಪಗಳು ಉಂಟಾಗಿರುವುದಿಲ್ಲ. |
| ಆ | ಸರ್ಕಾರ ನಿಗದಿಪಡಿಸಿದ ಮಾರ್ಗಸೂಚಿ ದರಕ್ಕಿಂತ ಕಡಿಮೆ ದರಕ್ಕೆ ನೋಂದಣಿ ಮಾಡಲು ಯಾವ ಅಧಿಕಾರಿ ಅನುಮತಿ ನೀಡುತ್ತಾರೆ; ಈ ರೀತಿಯಾಗಿ ಸರ್ಕಾರದ ಆದಾಯಕ್ಕೆ ಉದ್ದೇಶ ಪೂರ್ವಕವಾಗಿ ನಷ್ಟ ಉಂಟು ಮಾಡುವ ಉಪ ನೋಂದಣಾಧಿಕಾರಿಯನ್ನು ವಜಾ ಮಾಡದಿರಲು ಕಾರಣವೇನು; | ಮಾರ್ಗಸೂಚಿ ದರಕ್ಕಿಂತ ಕಡಿಮೆ ದರಕ್ಕೆ ನೋಂದಣಿ ಮಾಡಲು ಯಾವ ಅಧಿಕಾರಿಗಳು ಅನುಮತಿ ನೀಡಿರುವುದಿಲ್ಲ ಹಾಗೂ ಈ ರೀತಿ ನಷ್ಟ ಉಂಟು ಮಾಡಿರುವುದು ಕಂಡುಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ | ಸರ್ಕಾರಕ್ಕೆ ಉದ್ದೇಶಪೂರ್ವಕವಾಗಿ ಆದಾಯ ನಷ್ಟ ಉಂಟು ಮಾಡುವ ಉಪ ನೋಂದಣಾಧಿಕಾರಿಗಳ ಮೇಲೆ ಸರ್ಕಾರಕ್ಕೆ ವಂಚನೆ, ಉದ್ದೇಶ ಪೂರ್ವಕ ಮೋಸ, ರಾಜದ್ರೋಹದ ಪ್ರಕರಣ ದಾಖಲು ಮಾಡಲು ಯಾವ ಕ್ರಮಕೈಗೊಳ್ಳಲಾಗಿದೆ. | ಸರ್ಕಾರಕ್ಕೆ ನಷ್ಟವುಂಟು ಮಾಡಿರುವ ಅಧಿಕಾರಿಗಳ ವಿರುದ್ಧ ನೋಂದಣಿ ಕಾಯ್ದೆ, 1908 ಮತ್ತು ಕರ್ನಾಟಕ ಮುದ್ರಾಂಕ ಕಾಯ್ದೆ, 1957ರಡಿ ಇರುವ ಕಲಂಗಳನ್ವಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಅಗತ್ಯವಿದ್ದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ. |

ಸಂಖ್ಯೆ: ಕಂಇ/146/ಎಂಎನ್‌ಎಸ್‌ಎ/2020

(ಆರ್.ಅಶೋಕ)

ಕಂದಾಯ ಸಚಿವರು

# ಅನುಬಂಧ–1

ಕಾವೇರಿಪುರ, ಮಾರುತಿ ನಗರ, ಮೀನಾಕ್ಷಿನಗರ, ರಂಗನಾಥಪುರ ಮತ್ತು ಸಣ್ಣಕ್ಕಿಬಯಲು ಪ್ರದೇಶಗಳ ದರಗಳು

| ಕ್ರ ಸಂ. | ಬಡಾವಣೆ ಹೆಸರು | ಅವಧಿ ಮತ್ತು ಬಡಾವಣೆಗಳನ್ನು ರಚಿಸಿದ ಪ್ರದೇಶಕ್ಕೆ ನಿರ್ಧಿಷ್ಟ ಪಡಿಸಿದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯ ಪ್ರತಿ ಚದರ ಮೀಟರ್‌ಗೆ | | | | |
|---|---|---|---|---|---|---|
| | | **2013–14** | **2014–15** | **2016–17** | **2017–18** | **2018–19** |
| 1 | ಕಾವೇರಿಪುರ | 16,140/– | 23,680/– | 26,000/– | 26,000/– | 30,000/– |
| 2 | ಮಾರುತಿನಗರ | 16,140/– | 19,375/– | 21,500/– | 21,500/– | 30,000/– |
| 3 | ಮೀನಾಕ್ಷಿನಗರ | 32,280/– | 37,675/– | 41,500/– | 41,500/– | 43,600/– |
| 4 | ರಂಗನಾಥಪುರ | 21,520/– | 23,680/– | 26,000/– | 26,000/– | 29,100/– |
| 5 | ಸಣ್ಣಕ್ಕಿ ಬಯಲು | 10,760/– | 11,840/– | 13,500/– | 13,500/– | 15,600/– |

# ಅನುಬಂಧ-2

## ಸಾಣೆಗುರುವನಹಳ್ಳಿ ಪ್ರಮುಖ ಪ್ರದೇಶದಲ್ಲಿರುವ ಬಡಾವಣೆಗಳ ದರಗಳು

| ಕ್ರ ಸಂ | ಬಡಾವಣೆ ಹೆಸರು | ಅವಧಿ ಮತ್ತು ಬಡಾವಣೆಗಳನ್ನು ರಚಿಸಿದ ಪ್ರದೇಶಕ್ಕೆ ನಿರ್ಧಿಷ್ಟ ಪಡಿಸಿದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯ | | | | | | | | | |
|---|---|---|---|---|---|---|---|---|---|---|---|
| | | 2013-14 | | 2014-15 | | 2016-17 | 2017-18 | | 2018-19 | | |
| | | ದರ ಪ್ರತಿ ಚದರ ಅಡಿಗೆ | ಕ್ರಮ ಸಂಖ್ಯೆ ಪುಟ ಸಂಖ್ಯೆ | ದರ ಪ್ರತಿ ಚದರ ಮೀಟರ್‌ಗೆ | ಕ್ರಮ ಸಂಖ್ಯೆ ಪುಟ ಸಂಖ್ಯೆ | ದರ ಪ್ರತಿ ಚದರ ಮೀಟರ್‌ಗೆ | ಕ್ರಮ ಸಂಖ್ಯೆ ಪುಟ ಸಂಖ್ಯೆ | ದರ ಪ್ರತಿ ಚದರ ಮೀಟರ್‌ಗೆ | ಕ್ರಮ ಸಂಖ್ಯೆ ಪುಟ ಸಂಖ್ಯೆ | ದರ ಪ್ರತಿ ಚದರ ಮೀಟರ್‌ಗೆ | ಕ್ರಮ ಸಂಖ್ಯೆ ಪುಟ ಸಂಖ್ಯೆ |
| 1 | ಬಸವೇಶ್ವರನಗರ<br>ಕಾರ್ಡ್ ರಸ್ತೆ ಪಶ್ಚಿಮ ಎರಡನೇ ಹಂತ<br>ಬಸವೇಶ್ವರನಗರ | 5,500/- | 12, 11 | 64,584/- | 12, 10 | 77,000/- | 12, 11 | 77,000/- | 26, 12 | 80,000/- | 26, 23 |
| | ಕಾರ್ಡ್ ರಸ್ತೆ ಪಶ್ಚಿಮ ಎರಡನೇ ಹಂತ<br>ಬಸವೇಶ್ವರನಗರ 2,3,5 ,6 ಮತ್ತು 14ನೇ ಮುಖ್ಯರಸ್ತೆ (ಹೊಸ ಸೇರ್ಪಡೆ) | 6,000/- | 13, 11 | 69,996/- | 14, 10 | 77,000/- | 12, 11 | 77,000/- | 26, 12 | 80,000/- | 26, 23 |
| | ಕಾರ್ಡ್ ರಸ್ತೆ ಪಶ್ಚಿಮ ಎರಡನೇ ಹಂತ<br>ಬಸವೇಶ್ವರನಗರ 9,10, ಮತ್ತು 12ನೇ ಅಡ್ಡರ | 6,000/- | 14, 11 | 53,520/- | 15, 10 | 77,000/- | 13, 11 | 77,000/- | 27, 13 | 80,000/- | 27, 23 |
| 2 | ಕೆ.ಹೆಚ್.ಬಿ ಕಾಲೋನಿ 1ನೇ ಹಂತ | 4,000/- | 48, 14 | 53,820/- | 49, 12 | 59,300/- | 49, 15 | 59,300/- | 20, 12 | 62,000/- | 20, 18 |
| | ಕೆ.ಹೆಚ್.ಬಿ.ಕಾಲೋನಿ 80 ಅಡಿ ರಸ್ತೆ<br>ಬಸವೇಶ್ವರನಗರ | 6,500/- | 49,14 | 75,348/- | 50, 12 | 96,900/- | 50, 15 | 96,900/- | 21, 12 | 1,00,000/- | 21, 12 |
| | ಕೆ.ಹೆಚ್.ಬಿ ಕಾಲೋನಿ (ಹೆಚ್.ಐ.ಜಿ.) | 4,500/- | 51, 14 | 53,820/- | 52, 13 | 59,300/- | 52, 15 | 59,300/- | 23, 12 | 62,000/- | 23, 23 |
| | ಕೆ.ಹೆಚ್.ಬಿ ಕಾಲೋನಿ ಎಂ.ಐ.ಜಿ.) | 4,000/- | 52, 14 | 48,438/- | 53, 13 | 53,900/- | 53, 15 | 53,900/- | 24, 12 | 57,000/- | 24, 23 |
| | ಕೆ.ಹೆಚ್.ಬಿ ಕಾಲೋನಿ (ಎಲ್.ಐ.ಜಿ., ಇ.ಡಬ್ಲ್ಯೂ.ಎಸ್) | 3,500/- | 53, 14 | 43,056/- | 54, 13 | 48,500/- | 54, 15 | 48,500/- | 25, 12 | 52,000/- | 25, 23 |
| 3 | ಗಾಯಿತ್ರಿನಗರ ಹೆಚ್.ಬಿ.ಸಿ.ಎಸ್. | 4,000/- | 27, 12 | 48,438/- | 28, 11 | 53,900/- | 28, 13 | 53,900/- | 34, 13 | 58,000/- | 34, 28 |
| 4 | ಅಸ್ಪಗ್ರಾಮ ಸೊಸೈಟಿ (ಬಡಾವಣೆ) | 4,000/- | 28, 12 | 48,438/- | 29, 11 | 53,900/- | 29, 13 | 53,900/- | 35, 13 | 58,000/- | 35, 28 |
| 5 | ವೆಸ್ಟ್ ಆಫ್ ಕಾರ್ಡ್ ರೋಡ್ ಎಕ್ಸ್‌ಟೆನ್ಷನ್ | | | | | | | | | | |
| | ಕಾರ್ಡ್ ರಸ್ತೆ ಪಶ್ಚಿಮ 3 ನೇ ಹಂತ 2 ಹಾಗೂ 3ನೇ ಬ್ಲಾಕ್ ಎರಡೂ ಬದಿ ಸೇರಿ (ವಿ.ವಿ.ಎಸ್. ಕಾಲೇಜ್ 60 ಅಡಿ ರಸ್ತೆ) (ಹೊಸ ಸೇರ್ಪಡೆ) | 6,000/- | 44, 14 | 69,966/- | 45, 12 | 77,000/- | 45, 14 | 77,000/- | 51, 14 | 79,000/- | 52, 35 |
| 6 | ಎಲ್.ಐ.ಸಿ. ಕಾಲೋನಿ | 4,200/- | 32, 12 | 47,362/- | 33, 11 | 53,900/- | 33, 13 | 53,900/- | 39, 13 | 58,000/- | 39, 28 |